ಹೆಚ್ಚಾಗಿ ಅಡಗಿರುವಂತಿದೆ. ನಮ್ಮ ದೇಶದಲ್ಲೂ ವಿದೇಶೀ ಅನುಕರಣೆ ಜಾಸ್ತಿ. ನಮ್ಮವರು ಒಳ್ಳೆಯ ಬಂಗಾರ ಬಿಟ್ಟು ಕಾಗೆ ಬಂಗಾರದ ಹಿಂದೆ ಬಿದ್ದಿದ್ದಾರೆ. ಪ್ರಾಕೃತಿಕ ಸಂಪತ್ತು ನಮ್ಮಲ್ಲಿ ಬೇಕಾದಷ್ಟಿದೆ. ಆ ಸಂಪತ್ತನ್ನು ಬಳಸಿಕೊಂಡೇ ನಮ್ಮ ದೇಶದಲ್ಲಿ ಬೇಕಾದಷ್ಟು ವಿದ್ಯುತ್ ಅನ್ನು ಉತ್ಪಾದಿಸಬಹುದು. ಅದುಬಿಟ್ಟು ಜನ ವಿರೋಧಿಸುತ್ತಿದ್ದರೂ ಬಿಡದೆ ಪಟ್ಟುಹಿಡಿದು ಅಣು ಸ್ಥಾವರಗಳನ್ನು ದೇಶದ ನಾನಾ ಕಡೆ ಸ್ಥಾಪಿಸುತ್ತಿದ್ದಾರೆ" ಎಂದ ಜಿತೇಂದ್ರನ ಧ್ವನಿಯಲ್ಲಿ ವ್ಯಾಕುಲತೆ ತುಂಬಿತ್ತು.

"1986ರ ಏಪ್ರಿಲ್ 26ರಂದು ರಷ್ಯಾದ ಚೆರ್ನೋಬಿಲ್‌ನಲ್ಲಿ ಅಣು ದುರಂತ ಉಂಟಾದಾಗ ಜಗತ್ತೇ ಬೆಚ್ಚಿಬಿದ್ದಿತ್ತು. ಅಣು ವಿಕಿರಣದ ಸೋರಿಕೆಯಿಂದಾಗುವ ದುಷ್ಪರಿಣಾಮಗಳನ್ನು ತಿಳಿದೂ ಪಾಠ ಕಲಿಯುತ್ತಿಲ್ಲ ನಮ್ಮವರು. ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳ ಜೊತೆಗೆ, ಬಡದೇಶಗಳೂ ಕೂಡ ಅಣು ಸ್ಥಾವರಗಳಿಗಾಗಿ ಸ್ಪರ್ಧೆಗಿಳಿಯುತ್ತಿವೆ" ಅವಳ ಧ್ವನಿಯಲ್ಲೂ ಭವಿಷ್ಯದ ಕುರಿತ ಚಿಂತೆ ಆವರಿಸಿಕೊಂಡಿತ್ತು.

"ಅಣು ವಿಕಿರಣ ಸೋರಿಕೆಯಿಂದ ಉಂಟಾಗುವ ದುಷ್ಪರಿಣಾಮಗಳು ಕೆಲವು ಶತಕಗಳವರೆಗೆ ಲೋಕವನ್ನು ಕಾಡುತ್ತೆ. ಕ್ಯಾನ್ಸರ್, ಕರುಳ ವ್ಯಾಧಿಗಳು, ಹೃದಯ ಸಂಬಂಧಿ ಕಾಯಿಲೆಗಳು, ಅಂಗವಿಕಲತೆ, ದೃಷ್ಟಿ ಹೀನತೆಯ ಜೊತೆಗೆ ಪುನರುತ್ಪತ್ತಿ ಅವಯವಗಳ ಮೇಲೆಯೂ ದುಷ್ಪರಿಣಾಮ ಬೀರುವುದರ ಜೊತೆಗೆ ಮುಂದಿನ ತಲೆಮಾರಿಗೂ ವರ್ಗಾಯಿಸುತ್ತವೆ. ಸೂರ್ಯಕಿರಣಗಳು ಮೃತ್ಯುಕಿರಣಗಳಾಗಿ ಕ್ಯಾನ್ಸರಿಗೆ ಕಾರಣವಾಗುತ್ತವೆ. ಹೀಗೆ ಒಂದಲ್ಲ ಎರಡಲ್ಲ ಶತಶತಮಾನಗಳ ಕಾಲ ಈ ಅಣು ವಿಕಿರಣ ಸೋರುವಿಕೆಯ ಪರಿಣಾಮ ಮನುಷ್ಯನ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ವರ್ಗಾವಣೆಯಾಗಿ ಕಾಡಿಸದೆ ಬಿಡದು. ಇವೆಲ್ಲವನ್ನೂ ಪ್ರತಿ ದೇಶದ ಸರ್ಕಾರಗಳು ಗಮನದಲ್ಲಿಟ್ಟುಕೊಳ್ಳಬೇಕು. ದೇಶದ ರಕ್ಷಣೆಗಾಗಿಯೇ ಸರ್ಕಾರ ರಚನೆಯಾಗಿರುವುದು. ಆದರೆ, ಆ ಸರ್ಕಾರಗಳೇ ಅವನತಿಯ ಮಾರ್ಗದಲ್ಲಿ ನಡೆದರೆ ಆ ದೇವರೂ ಕಾಪಾಡಲಾರ..." ಅಷ್ಟರಲ್ಲಿ ಸೆಲ್‌ಫೋನ್ ಮೊಳಗಿತು. ರಿಸೀವ್ ಮಾಡಿದ ಜಿತೇಂದ್ರ, ''ಹೇಳಿ ಸರ್...'' ಎಂದ.

**ಸಭೆಯಲ್ಲಿದ್ದ ವಿಜ್ಞಾನಿಗಳೆಲ್ಲ ತಮ್ಮ ಬಲಗೈಗಳನ್ನು ಮೇಲೆತ್ತಿ, "ನಾವು ನಿಮ್ಮೊಡನೆ ಇದ್ದು, ಫುಕುಶಿಮಾವನ್ನು ಕಾಪಾಡಲು ಸಹಕರಿಸುತ್ತೇವೆ" ಎಂದು ಒಕ್ಕೊರಲಿನಿಂದ ಘೋಷಿಸಿದರು. ಮೆಹತಾ ಮುಖ ಸಂತೋಷದಿಂದ ಅರಳಿತ್ತು. ಎದೆ ಗರ್ವದಿಂದ ಉಬ್ಬಿತ್ತು.**

"ಅಣು ಸ್ಥಾವರದಲ್ಲಿ ತುರ್ತುಪರಿಸ್ಥಿತಿ. ನಿಮ್ಮ ಅಗತ್ಯವಿದೆ. ನೀವು ನಿಮ್ಮ ಬಿಲ್ಡಿಂಗಿನ ಮೇಲ್ಭಾಗಕ್ಕೆ ಬೇಗ ಬನ್ನಿ. ನಿಮಗಾಗಿ ಹೆಲಿಕಾಪ್ಟರ್ ಹೊರಟಿದೆ."

"ಓಕೆ ಸರ್! ಈಗಲೇ ಹೊರಡ್ತಿದೀವಿ..." ಎನ್ನುತ್ತಾ ಕರೆಯನ್ನು ಕತ್ತರಿಸಿ ಶ್ಯಾಮಲಾ ಕಡೆ ತಿರುಗಿ ಹೇಳಿದ, "ಶ್ಯಾಮಲಾ, ನಡೀರಿ... ಫುಕುಶಿಮಾದಿಂದ ನಮಗಾಗಿ ಕರೆ ಬಂದಿದೆ. ಅಲ್ಲಿ ನಮ್ಮ ಅಗತ್ಯವಿದೆ..."

ಅವನು ಮಾತನ್ನು ಮುಗಿಸುವ ಮೊದಲೇ ಮೇಲೆದ್ದು ನಿಂತು ಶ್ಯಾಮಲಾ ಹೇಳಿದಳು.